ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಮುಖ್ಯ ಇಂಜಿನಿಯರ್(ವಿ) ರವರ ಕಛೇರಿ, ಚಾವಿಸನಿನಿ,
66/11 ಕೆವಿ ವಿ.ವಿ.ಕೇಂದ್ರ ಪಕ್ಕ, ದಟ್ಟಗಳ್ಳಿ ವರ್ತುಲ ರಸ್ತೆ,
ಕನಕದಾಸನಗರ, ಮೈಸೂರು-570023.
ಫೋನ್ ನಂ:0821-2342164
ಫ್ಯಾಕ್ಸ್ ನಂ:0821-2344093

CHAMUNDESHWARI ELECTRICITY SUPPLY CORPORATION LIMITED
(A Government of Karnataka Undertaking)
Chief Engineer (Electy), O&M Zone, CESC,
Beside 66/11KV MUSS Dattagalli Ring Road,
Kanakadasa Nagar Mysuru-570023.
E-Mail-ID-ceez@cescmysore.org
Web Site: www.cescmysore.org

Company Identity Number (CIN): U40109KA2004SGC035177

## ಅಧಿಕೃತ ಜ್ಞಾಪನಾ

**ವಿಷಯ:** ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಹುಲಿಕೆರೆ ಗ್ರಾಮದಲ್ಲಿ ಮೆ॥ ಜುವಾರಿ ಇನ್ ಫ್ರಾ ವರ್ಲ್ಡ್ ಇಂಡಿಯಾ ಲಿ. ರವರು ನಿರ್ಮಿಸುತ್ತಿರುವ ವಸತಿ ಸಮುಚ್ಛಯಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸುವ ಬಗ್ಗೆ-ಆಡಳಿತಾತ್ಮಕ ಅನುಮೋದನೆಯ ಅವಧಿಯ ವಿಸ್ತರಣೆ ಬಗ್ಗೆ.

**ಉಲ್ಲೇಖ:**
1. ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾವಿಸನಿನಿ, ಮಂಡ್ಯ ರವರ ಪತ್ರ ಸಂಖ್ಯೆ:ಅಇಂ/ಕಾಇಂ/ಸಕಾಇಂ(ಕ)/ಸಇಂ(ತಾಂ)/ಕ-53/2023-24/2806 ದಿನಾಂಕ:14.09.2023.
2. ನಿಗಮ ಕಾರ್ಯಾಲಯ ಪತ್ರ ಸಂಖ್ಯೆ:ಸೆಸ್ಕ್/ಪ್ರವ್ಯ(ತಾಂ)/3/28/2023-24/9682-84 ದಿನಾಂಕ:01.09.2023.
3. ಮೆ॥ ಜುವಾರಿ ಇನ್ ಫ್ರಾ ವರ್ಲ್ಡ್ ಇಂಡಿಯಾ ಲಿ. ರವರ ಮನವಿ ಪತ್ರ ದಿನಾಂಕ:24.08.2023.
4. ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾವಿಸನಿನಿ, ಮಂಡ್ಯ ರವರ ಪತ್ರ ಸಂಖ್ಯೆ:ಅಇಂ/ಕಾಇಂ/ಸಕಾಇಂ(ಕ)/ಸಇಂ(ತಾಂ)/ಕ-53/2023-24/2522 ದಿನಾಂಕ:28.08.2023.
5. ಈ ಕಛೇರಿ ಪತ್ರ ಸಂಖ್ಯೆ:ಮುಇಂ(ವಿ)/ಅಇಂ(ವಿ)/ಸಕಾಇಂ-2/2020-21/5956-58 ದಿನಾಂಕ:08.01.2021.
6. ಈ ಕಛೇರಿ ಪತ್ರ ಸಂಖ್ಯೆ:ಮುಇಂ(ವಿ)/ಅಇಂ(ವಿ)/ಸಕಾಇಂ-2/2020-21/4238-41 ದಿನಾಂಕ:27.10.2020.
7. ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾವಿಸನಿನಿ, ಮಂಡ್ಯ ರವರ ಪತ್ರ ಸಂಖ್ಯೆ:ಅಇಂ/ಕಾಇಂ(ಕ)/ಸಕಾಇಂ(ಕ)/ಸಇಂ(ತಾಂ)/ಕ-53/2020-21/3373 ದಿನಾಂಕ:24.09.2020.

** ** **

**ಪೀಠಿಕೆ:**

- ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಹುಲಿಕೆರೆ ಗ್ರಾಮದಲ್ಲಿ ಮೆ॥ ಜುವಾರಿ ಇನ್ ಫ್ರಾ ವರ್ಲ್ಡ್ ಇಂಡಿಯಾ ಲಿ. ರವರು ನಿರ್ಮಿಸುತ್ತಿರುವ ವಸತಿ ಸಮುಚ್ಛಯಕ್ಕೆ ಮಂಜೂರಾತಿಯಾಗಿರುವ ಆಡಳಿತಾತ್ಮಕ ಅನುಮೋದನೆಯ ಅವಧಿಯ ವಿಸ್ತರಣೆಯನ್ನು ಕೋರಿ ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾವಿಸನಿನಿ, ಮಂಡ್ಯ ರವರು ಉಲ್ಲೇಖ (4) ರಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಗೆ ಸಂಬಂಧಿಸಿದ ವಿವರಗಳು ಈ ಕೆಳಗಿನಂತಿವೆ.
- ಪಾಂಡವಪುರ ವಿಭಾಗ, ಶ್ರೀರಂಗಪಟ್ಟಣ ಉಪ-ವಿಭಾಗ, ಹುಲಿಕೆರೆ ಗ್ರಾಮ ವ್ಯಾಪ್ತಿಯ ಮೆ॥ ಜುವಾರಿ ಇನ್ ಫ್ರಾ ವರ್ಡ್ ಇಂಡಿಯಾ ಪ್ರೈಲಿ, ಹುಲಿಕೆರೆ ಗ್ರಾಮದವರು ಫೇಸ್-2 ನಲ್ಲಿ ವಸತಿ ಸಮುಚ್ಛಯಕ್ಕೆ 977 ಕಿ.ವ್ಯಾ ವಿದ್ಯುತ್ ಸರಬರಾಜು ಪಡೆಯುವ ಸಲುವಾಗಿ ದಿನಾಂಕ: 04.09.2020 ರಂದು ಅರ್ಜಿ ನೊಂದಾಯಿಸಿರುತ್ತಾರೆ.
- ಸದರಿ ಪ್ರಸ್ತಾವನೆಗೆ ವಿದ್ಯುತ್ ಸರಬರಾಜು ಮಾಡುವ ಸಲುವಾಗಿ ಮೂಲ ಸೌಕರ್ಯವನ್ನು ಕಲ್ಪಿಸಲು ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾವಿಸನಿನಿ, ಮಂಡ್ಯ ರವರು ಉಲ್ಲೇಖ(6) ರಲ್ಲಿ ಅಂದಾಜುಪಟ್ಟಿಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಅಂದಾಜುಪಟ್ಟಿಯ ಮೊತ್ತವು ರೂ.87,54,400/- ಗಳಾಗಿರುತ್ತದೆ.
- ಅರ್ಜಿದಾರರು ನಿಗದಿತ ಶುಲ್ಕಗಳನ್ನು ದಿನಾಂಕ 24.12.2020 ರಂದು ಪಾವತಿಸಿರುತ್ತಾರೆ. ನಂತರ ಈ ಕಛೇರಿಯಿಂದ ಅಂದಾಜು ಪಟ್ಟಿ ಮೊತ್ತ ರೂ.87,54,400/-ಕ್ಕೆ ಆಡಳಿತಾತ್ಮಕ ಅನುಮೋದನೆ ಸಂಖ್ಯೆ: MDY-23/2020-21 ಯನ್ನು ದಿನಾಂಕ: 05.01.2021 ರಲ್ಲಿ ಮಂಜೂರಾತಿಯನ್ನು ನೀಡಲಾಗಿರುತ್ತದೆ. ಮುಂದಿನ ಕ್ರಮವನ್ನು ಕೈಗೊಳ್ಳುವ ಸಲುವಾಗಿ ವೃತ್ತ ಕಛೇರಿಗೆ ಉಲ್ಲೇಖ (5) ರಲ್ಲಿ ಕಡತವನ್ನು ರವಾನಿಸಲಾಗಿರುತ್ತದೆ.
- ಆಡಳಿತಾತ್ಮಕ ಅನುಮೋದನೆಯ ಮಾನ್ಯತಾ ಅವಧಿಯು ದಿನಾಂಕ 04.01.2023 (2 ವರ್ಷ) ರವರೆಗೆ ಊರ್ಜಿತದಲ್ಲಿರುತ್ತದೆ
- ಈ ಕಛೇರಿಯಿಂದ ಆಡಳಿತಾತ್ಮಕ ಅನುಮೋದನೆ ನೀಡಿದ ನಂತರ ಪಾಂಡವಪುರ ವಿಭಾಗ ಕಛೇರಿಯಲ್ಲಿ ಮಂಜೂರಾತಿ ಸಂಖ್ಯೆ SE256 ದಿನಾಂಕ 01.02.2021 ರಲ್ಲಿ **Self execution Certificate** ಅನ್ನು ಹೊರಡಿಸಿರುತ್ತಾರೆ.

- ಆಡಳಿತಾತ್ಮಕ ಅನುಮೋದನೆಯ ಅವಧಿಯ ವಿಸ್ತರಣೆಯನ್ನು ಕೋರಿ ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾವಿಸನಿನಿ, ಮಂಡ್ಯ ರವರು ಉಲ್ಲೇಖ (4) ರಲ್ಲಿ ಪ್ರಸ್ತಾವನೆಯನ್ನು ಈ ಕಚೇರಿಗೆ ಸಲ್ಲಿಸಿರುತ್ತಾರೆ.
- ಅರ್ಜಿದಾರರು ಮಹಾಮಾರಿ ಕೋವಿಡ್-19 ರ ನಿಮಿತ್ತ ಕಾಮಗಾರಿಯನ್ನು ಕೈಗೊಳ್ಳಲು ವಿಳಂಬವಾಗಿರುವುದರಿಂದ ಆಡಳಿತಾತ್ಮಕ ಅನುಮೋದನೆಯ ಅವಧಿಯ ವಿಸ್ತರಣೆಯನ್ನು ಕೋರಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಿಗೆ ದಿನಾಂಕ 24.08.2023 ರಂದು ಮನವಿಯನ್ನು ಸಲ್ಲಿಸಿದ್ದು, ಅರ್ಜಿದಾರರ ಮನವಿಯನ್ನು ಪರಿಶೀಲಿಸಿ ನಿಗಮದ ನಿಯಮಾನುಸಾರ ಸೂಕ್ತ ಕ್ರಮವನ್ನು ಕೈಗೊಳ್ಳುವಂತೆ ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಚಾವಿಸನಿನಿ, ಮೈಸೂರು ರವರು ಉಲ್ಲೇಖ(2) ರಲ್ಲಿ ತಿಳಿಸಿರುತ್ತಾರೆ.
- ಅಂದಾಜುಪಟ್ಟಿಯನ್ನು ಚಾಲ್ತಿಯಲ್ಲಿರುವ ದರಪಟ್ಟಿಗನುಗುಣವಾಗಿ ಪರಿಷ್ಕರಿಸಿ ಪ್ರಸ್ತಾವನೆಯನ್ನು ಆಡಳಿತಾತ್ಮಕ ಅನುಮೋದನೆಯ ಅವಧಿಯನ್ನು ವಿಸ್ತರಿಸುವ ಸಲುವಾಗಿ ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾವಿಸನಿನಿ, ಮಂಡ್ಯ ರವರು ಉಲ್ಲೇಖ (1) ರಲ್ಲಿ ಈ ಕಚೇರಿಗೆ ಮರುಸಲ್ಲಿಸಿರುತ್ತಾರೆ.
- ಉಲ್ಲೇಖ(1 &4) ರಲ್ಲಿ ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾವಿಸನಿನಿ, ಮಂಡ್ಯ ರವರು ಈ ಕೆಳಕಂಡಂತೆ ತಿಳಿಸಿರುತ್ತಾರೆ.
  - ಅರ್ಜಿದಾರರು ಕಾಮಗಾರಿಯನ್ನು ಪೂರ್ಣಗೊಳಿಸಿದ್ದು, ಮುಖ್ಯ ವಿದ್ಯುತ್ ಪರಿವೀಕ್ಷಕರು, ಕರ್ನಾಟಕ ಸರ್ಕಾರ, ಮೈಸೂರು ರವರು ದಿನಾಂಕ:31.03.2023 ರ ಪತ್ರದಲ್ಲಿ ಅನುಮೋದನೆ ನೀಡಿರುವುದಾಗಿ ತಿಳಿಸಿರುತ್ತಾರೆ.
  - ತಾಂತ್ರಿಕ ಪರಿಶೋಧನೆ ಮತ್ತು ಗುಣಮಟ್ಟ ನಿಯಂತ್ರಣ ವಿಭಾಗ, ಚಾವಿಸನಿನಿ, ಮೈಸೂರು ರವರ ಪತ್ರ ಸಂಖ್ಯೆ:ಚಾವಿಸನಿನಿ/ ಉಪ್ರವ್ಯ/ರಾಮ ಮತ್ತು ಗುನಿ-1/ಕ-17/2023-24/1573-74 ದಿನಾಂಕ:27.04.2023 ರ ಅನ್ವಯ ಅನುಮೋದನೆ ನೀಡಿರುವುದಾಗಿ ತಿಳಿಸಿರುತ್ತಾರೆ.
  - ಎಲ್.ಟಿ ರೇಟಿಂಗ್ ಉಪವಿಭಾಗ, ಚಾವಿಸನಿನಿ, ಪಾಂಡವಪುರ ರವರು ಪತ್ರ ಸಂಖ್ಯೆ: ಸಕಾನಿಇಂ(ವಿ)/ಸಇಂ(ವಿ)/ಎಲ್.ಟಿ.ರೇ.ಉ.ವಿ/ 2023-24/146-48 ದಿನಾಂಕ 25.05.2023 ರ ಪತ್ರದನ್ವಯ ಪರೀಕ್ಷಾ ವರದಿ ನೀಡಿರುವುದಾಗಿ ತಿಳಿಸಿರುತ್ತಾರೆ.
- ಅಂದಾಜು ಪಟ್ಟಿಯನ್ನು ಚಾಲ್ತಿಯಲ್ಲಿರುವ ದರಪಟ್ಟಿಗನುಗುಣವಾಗಿ ಪರಿಷ್ಕರಿಸಿದ್ದು, ಪರಿಷ್ಕೃತ ಅಂದಾಜುಪಟ್ಟಿಯ ಮೊತ್ತವು ರೂ.1,07,01,785/- ಗಳಾಗಿದ್ದು, ಈ ಹಿಂದೆ ಅನುಮೋದಿಸಿದ್ದ ಅಂದಾಜುಪಟ್ಟಿಯ ಮೊತ್ತವು ರೂ.87,54,400/- ಗಳಾಗಿದ್ದು, ವ್ಯತ್ಯಾಸದ ಮೊತ್ತ ರೂ.19,47,385/-ಗಳಾಗಿರುತ್ತದೆ. ಮೇಲೆ ವಿವರಿಸಲಾಗಿರುವ ಅಂಶಗಳನ್ನು ಪರಿಗಣಿಸಿ ಈ ಕೆಳಗಿನಂತೆ ಆದೇಶವನ್ನು ಹೊರಡಿಸಲಾಗಿರುತ್ತದೆ.

ಕ್ರಮಾಂಕ:ಮುಇಂ(ವಿ)/ಅಇಂ(ವಿ)/ಸಕಾಇಂ(ಕ)-2/2023-24/4840-42 ದಿನಾಂಕ: 18 OCT 2023

**ಆದೇಶ**

ಆಡಳಿತಾತ್ಮಕ ಅನುಮೋದನೆಯ ಅವಧಿಯನ್ನು ದಿನಾಂಕ 05.01.2023 ರಿಂದ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಲಾಗಿದ್ದು, ಈ ವಿಸ್ತರಣೆಯು ಕೆಳಗೆ ತಿಳಿಸಿರುವ ಷರತ್ತಿಗೊಳಪಟ್ಟಿರುತ್ತದೆ.

1. ಅರ್ಜಿದಾರರು ಮರು ನೊಂದಣಿ ಶುಲ್ಕವನ್ನು ಪಾವತಿಸತಕ್ಕದ್ದು.
2. ಅರ್ಜಿದಾರರು ಸ್ಥಾವರಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸುವ ಮುನ್ನ ಈ ಕೆಳಗೆ ತಿಳಿಸಿರುವ ಶುಲ್ಕಗಳನ್ನು **ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ಉಪವಿಭಾಗ, ಚಾವಿಸನಿನಿ, ಶ್ರೀರಂಗಪಟ್ಟಣ** ರವರ ಕಛೇರಿಯಲ್ಲಿ ಪಾವತಿಸತಕ್ಕದ್ದು. ಅರ್ಜಿದಾರರು ಪಾವತಿಸಬೇಕಾಗಿರುವ ಶುಲ್ಕಗಳ ವಿವರಗಳು ಈ ಕೆಳಗಿನಂತಿವೆ.

| ಸ್ವಯಂ ಕಾರ್ಯನಿರ್ವಹಣೆ ಕಾಮಗಾರಿಯ ಭಾಗ | Account Head | ಪಾವತಿಸಬೇಕಾದ ಮೊತ್ತ (ರೂ ಗಳಲ್ಲಿ) |
|---|---|---|
| ಮೇಲ್ವಿಚಾರಣಾ ಶುಲ್ಕ @ 10% | 62.907 | **₹2,20,881/-** (ರೂ. ಎರಡು ಲಕ್ಷದ ಇಪ್ಪತ್ತು ಸಾವಿರದ ಎಂಟು ನೂರ ಎಂಬತ್ತೊಂದು ಮಾತ್ರ) |
| **CGST 9%** | 46.997 | **₹19,879/-** (ರೂ. ಹತ್ತೊಂಬತ್ತು ಸಾವಿರದ ಎಂಟು ನೂರ ಎಪ್ಪತ್ತೊಂಬತ್ತು ಮಾತ್ರ) |
| **SGST 9%** | 46.998 | **₹19,879/-** (ರೂ. ಹತ್ತೊಂಬತ್ತು ಸಾವಿರದ ಎಂಟು ನೂರ ಎಪ್ಪತ್ತೊಂಬತ್ತು ಮಾತ್ರ) |
| ಠೇವಣಿವಂತಿಗೆ ಕಾಮಗಾರಿ (DCW) ಭಾಗ | 47.3067 | **₹76,146/-** (ರೂ. ಎಪ್ಪತ್ತಾರು ಸಾವಿರದ ಒಂದು ನೂರ ನಲವತ್ತಾರು ಮಾತ್ರ) |

3. ಸ್ಥಾವರಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಿದ ನಂತರ **ಗ್ರಾಹಕರು/ಅರ್ಜಿದಾರರು/ನೆಲಸಿಗರು(Occupant)** ಹಾಗೂ ವಿದ್ಯುತ್ ಗುತ್ತಿಗೆದಾರರ ನಡುವೆ ಒಂದು ವೇಳೆ ವ್ಯಾಜ್ಯಗಳು ಉಂಟಾದಲ್ಲಿ ಅಂತಹ ಸಂದರ್ಭದಲ್ಲಿ ಚಾವಿಸನಿನಿಗೆ ಉಂಟಾಗಬಹುದಾದ ನಷ್ಟವನ್ನು ಭರಿಸಿಕೊಡುವ ಸಂಬಂಧ **ರೂ.200.00** ರ ಛಾಪಾ ಕಾಗದದ ಮೇಲೆ Indemnity Bond ಅನ್ನು ಅರ್ಜಿದಾರರು ಸ್ಥಾವರಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸುವ ಮುನ್ನ ಸಲ್ಲಿಸತಕ್ಕದ್ದು.
4. ಸದರಿ ಸ್ಥಾವರಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸುವ ಸಂಬಂಧ Electricity act 2003, ಕೆ.ಇ.ಆರ್.ಸಿ ನಿಯಮಾನುಸಾರ ಮತ್ತು ಅದರ ತಿದ್ದುಪಡಿ ಅನುಸಾರ ಸೂಕ್ತ ಕ್ರಮ ಕೈಗೊಳ್ಳುವುದು.

18/10/2023

**ಮುಖ್ಯ ಇಂಜಿನಿಯರ್(ವಿದ್ಯುತ್),**
**ಕಾರ್ಯ ಮತ್ತು ಪಾಲನಾ ವಲಯ,**
**ಚಾವಿಸನಿನಿ, ಮೈಸೂರು**

**ಪ್ರತಿಗಳನ್ನು ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ರವಾನಿಸಲಾಗಿದೆ.**

1. ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾವಿಸನಿನಿ, ಮಂಡ್ಯ ರವರ ಮಾಹಿತಿಗಾಗಿ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ವಿಭಾಗ, ಚಾವಿಸನಿನಿ, ಪಾಂಡವಪುರ ರವರ ಮಾಹಿತಿಗಾಗಿ.
3. ಸಹಾಯಕ ಕಾಯ್ನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ಉಪವಿಭಗ, ಶ್ರೀರಂಗಪಟ್ಟಣ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
4. ಸಕಾಇಂ-2/ಮು.ಕ.